RNU AIR DHARWAD

NOVEMBER 21, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ಧಾರವಾಡ ಐ.ಐ.ಟಿ.ಯಿಂದ, ಸೈನಿಕರಿಗಾಗಿ, ಸ್ವದೇಶಿ ತಂತ್ರಜ್ಞಾನದ, ಹಗುರ, ಸುಲಭ ಸಾಗಣೆ ಸಾಧ್ಯ, ಬುಲೆಟ್ ನಿರೋಧಕ ಬಂಕರ್, ವಿನ್ಯಾಸ.

ರಾಜ್ಯದ 4 ಸಾವಿರದ 828 ಕೆರೆಗಳ ಒತ್ತುವರಿ ತೆರವಿಗೆ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ವಿಶೇಷ ಕಾರ್ಯಪಡೆ ರಚನೆ.

ರಾಜ್ಯದ, 3 ಸಾವಿರ ಕೊಳೆಗೇರಿಗಳ ಅಭಿವೃದ್ಧಿಗೆ, ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ, ಯೋಜಿತ ಪ್ರಯತ್ನ.

ಇಂದು, ವಿಶ್ವ ಮೀನುಗಾರಿಕೆ ಪ್ರೋತ್ಸಾಹ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಧಾರವಾಡ, ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ., ಸ್ವದೇಶಿ ತಂತ್ರಜ್ಞಾನ ಬಳಸಿ, ಹಗುರ, ಸುಲಭ ಸಾಗಣೆ ಸಾಧ್ಯ ಬಂಕರ್ ಅನ್ನು, ಪಶ್ಚಿಮ ಬಂಗಾಳದ ಪನಾಘಡದ ಭಾರತೀಯ ಸೇನೆಯ, ಪೂರ್ವ ಕಮಾಂಡ್ ನ, 6ನೇ ಇಂಜಿನಿಯರ್ಸ್ ರೆಜಿಮೆಂಟ್ ಪ್ರಾಯೋಜಕತ್ವದಲ್ಲಿ, ಅಭಿವೃದ್ಧಿ

ಪಡಿಸಿದೆ. 29 ಲಕ್ಷದ 53 ಸಾವಿರ ರೂಪಾಯಿ ವೆಚ್ಚದಲ್ಲಿ, ಈ ಸ್ವದೇಶಿ ಬಂಕರ್ ಅಭಿವೃದ್ಧಿಪಡಿಸಲಾಗಿದ್ದು, ಗುಂಡು ನಿರೋಧಕವಾಗಿದೆ. ಧಾರವಾಡ ಐ.ಐ.ಟಿ.ಯ ಮೆಕ್ಯಾನಿಕಲ್, ಮೆಟೀರಿಯಲ್ಸ್ ಮತ್ತು ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ, ಡಾಕ್ಟರ್ ವ್ಯೋಮ್ ಶರ್ಮಾ ಸಹಾಯಕ ಪ್ರಾಧ್ಯಾಪಕ ಡಾಕ್ಟರ್ ಪುನ್ನಾಗ್ ಚಟರ್ಜಿ, ಕಿರಿಯ ತಾಂತ್ರಿಕ ಅಧೀಕ್ಷಕ ಕುಲದೀಪಸಿಂಗ್ ಹಾಗೂ ತಂತ್ರಜ್ಞ ಆನಂದ ದೊಡ್ಡಮನಿ, ಬಂಕರ್ ನಿರ್ಮಾಣದಲ್ಲಿ, ಪ್ರಮುಖ ಪಾತ್ರ ವಹಿಸಿದ್ದಾರೆ. ಧಾರವಾಡ ಐ.ಐ.ಟಿ.ಯ ಕಿರಿಯ ತಾಂತ್ರಿಕ ಅಧೀಕ್ಷಕ, ಕುಲದೀಪಸಿಂಗ್, ಸ್ವದೇಶಿ ನಿರ್ಮಿತ ವಿಶಿಷ್ಟ ಬಂಕರ್ ಕುರಿತು ಮಾಹಿತಿ, ನೀಡಿದ್ದಾರೆ.

<><><>

ಕುಲದೀಪಸಿಂಗ್ ಧ್ವನಿ– 43 ಸೆಕೆಂದುಗಳು

<><><>

ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ, 4 ಸಾವಿರದ 828 ಕೆರೆಗಳ, 11 ಸಾವಿರದ 671 ಎಕರೆ ಒತ್ತುವರಿ ಆಗಿದ್ದು, ವಿಶೇ ' ಕಾರ್ಯಪಡೆ ರಚಿಸಿ, ತೆರವುಗೊಳಿಸುವುದಾಗಿ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಸಂಪರ್ಕ ಯೋಜನೆ ಹಾಗೂ ಮುಖ್ಯಮಂತ್ರಿ ಗ್ರಾಮೀಣಾಭಿವೃದ್ಧಿ ಯೋಜನೆಯಡಿ, 16 ಸಾವಿರ ಕೋಟಿ ರೂಪಾಯಿ ಕಾಮಗಾರಿಗಳ, ವಿಧಾನಸೌಧದ ಸಮ್ಮೇಳನ ಸಭಾಂಗಣದ ಚಾಲನಾ ಸಮಾರಂಭದಲ್ಲಿ ಅವರು, ಮಾತನಾಡಿದರು. 5 ಸಾವಿರದ 9 ನೂರಾ 27 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ, 32 ಸಾವಿರದ 504 ಕೆರೆಗಳ ಪೈಕಿ, 4 ಸಾವಿರದ 8 ನೂರಾ 28 ಕೆರೆಗಳ, ಒತ್ತುವರಿ ತೆರವು ಬಾಕಿ ಇದೆ. ಸಾರ್ವಜನಿಕರೂ ಸಹಕರಿಸಬೇಕು ಎಂದರು.

<><><>

ಮಾದಕ ವಸ್ತುಗಳ ಬಳಕೆ, ಸಾಗಣೆ ಮತ್ತು ಮಾರಾಟ ಸೇರಿದಂತೆ, ಮಹಿಳೆಯರ ಮೇಲಿನ ದೌರ್ಜನ್ಯ ತಡೆ, ಮಕ್ಕಳಿಗೆ ನಿರ್ಭಯದ ವಾತಾವರಣ, ಮತ್ತು ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸಲು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಉಪ ಮುಖ್ಯಮಂತ್ರಿ ಡಾಕ್ಟರ್ ಜಿ. ಪರಮೇಶ್ವರ ಹಾಗೂ ಗೃಹ ಖಾತೆ ಸಚಿವ ಪ್ರಿಯಾಂಕ ಖರ್ಗೆ, ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ, ಸಮಾಲೋಚಿಸಿದರು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿಯವರು, ಕಳೆದ ವರ್ಷ, ಸುಮಾರು 10 ಲಕ್ಷ ಕೋಟಿ ರೂಪಾಯಿ ಬಂಡವಾಳ

ಹೂಡಿಕೆಗೆ, ರಾಜ್ಯ ಒಪ್ಪಂದ ಮಾಡಿಕೊಂಡಿದೆ. ಕಾನೂನು ಪಾಲನೆ, ಶಾಂತಿ, ಸುವ್ಯವಸ್ಥೆ ಹಾಗೂ ನಾಗರಿಕರ ಸುರಕ್ಷತೆ, ಪೊಲೀಸರ ಪ್ರಥಮ ಆದ್ಯತೆಯಾಗಲಿ ಎಂದರು.

<><><>

ಮದ್ಯ ಮತ್ತು ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸಲು, ರಾಜ್ಯ ಮದ್ಯಪಾನ ಸಂಯಮ ಮಂಡಳಿ, 2026–27ನೇ ಸಾಲಿನಲ್ಲಿ ಯಶೋಧರಾ ದಾಸಪ್ಪ ಪ್ರಶಸ್ತಿಗಾಗಿ ಮಹಿಳೆಯರು ಮತ್ತು ಮಹಿಳೆಯರಿಂದ ಸ್ಥಾಪಿತವಾದ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಅರ್ಜಿ ಆಹ್ವಾನಿಸಿದೆ. ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಹಿರಿಯ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದ, ಯಶೋಧರಾ ದಾಸಪ್ಪ ಅವರು, ರಾಜ್ಯದಲ್ಲಿ ಪಾನ ನಿಷೇಧ ವಿರೋಧಿಸಿ ಅವರು, ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿ, ತಮ್ಮ ಬದ್ಧತೆ ತೋರಿದ್ದರು. 'ಯಶೋಧರಾ ದಾಸಪ್ಪ' ಅವರ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ನಗದು ಬಹುಮಾನ ಹಾಗೂ ಪ್ರಶಸ್ತಿಯನ್ನು ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಇದೇ 25ನೇ ತಾರೀಖು, ಅಂತಿಮ ದಿನವಾಗಿದೆ.

<><><>

ಪುಸ್ತಕಗಳು ಕೇವಲ ಜ್ಞಾನಾರ್ಜನೆಯ ಮಾಧ್ಯಮಗಳಲ್ಲ; ಅವು ನಮ್ಮ ಆಲೋಚನೆಗಳಿಗೆ ದಿಕ್ಕು ನೀಡುತ್ತವೆ, ಮಾನವೀಯ ಸಂವೇದನೆಗಳನ್ನು ಶ್ರೀಮಂತಗೊಳಿಸುತ್ತವೆ ಎಂದು ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ, ಅಭಿಪ್ರಾಯಪಟ್ಟಿದ್ದಾರೆ. ಬೆಂಗಳೂರಿನ, ಜಯನಗರದ, ಚಂದ್ರಗುಪ್ತ ಮೌರ್ಯ ಮೈದಾನದಲ್ಲಿ, ವೀರಲೋಕ ಪ್ರಕಾಶನದ, 6ನೇ ಪುಸ್ತಕ ಸಂತೆ ಉದ್ಘಾಟಿಸಿ, ಅವರು ಮಾತನಾಡಿದರು. ಕನ್ನಡ ಭಾ ೆಯ ಇತಿಹಾಸ ಸಾವಿರ ವ ರ್ಷಗಳಿಗೂ ಹೆಚ್ಚಿನದು. ಕನ್ನಡ ಸಾಹಿತ್ಯ ಸಮಾಜಕ್ಕೆ ಸದಾ ಹೊಸ ಚಿಂತನೆ ಹಾಗೂ ದಿಕ್ಕನ್ನು ತೋರಿದೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದಲ್ಲಿ 3 ಸಾವಿರ ಕೊಳೆಗೇರಿಗಳಿದ್ದು, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅನೇಕ ಅಭ್ಯುದಯ ಯೋಜನೆಗಳನ್ನು ರೂಪಿಸಿದೆ ಎಂದು, ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಪ್ರಸಾದ ಅಬ್ಬಯ್ಯ ತಿಳಿಸಿದ್ದಾರೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸುವರ್ಣ ಮಹೋತ್ಸವ ಸಭಾಂಗಣದಲ್ಲಿ, 18ನೇ ರಾಷ್ಟ್ರೀಯ ಸಮಾಜಶಾಸ್ತ್ರ ಸಮ್ಮೇಳನದಲ್ಲಿ, ಪ್ರಧಾನಮಂತ್ರಿ ಉಷಾ ಯೋಜನೆ ಅಡಿ, 'ಭಾರತದ ಕೊಳೆಗೇರಿಗಳು, ಸಾಮಾಜಿಕ ಒಳಗೊಳ್ಳುವಿಕೆ ಮತ್ತು ನ್ಯಾಯ; ನಗರ ಅಂಚಿನ ಸಮುದಾಯಗಳ ನೆಲೆಗಳು' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ಪದ್ಮಶ್ರೀ ಅನಿತಾ ರೆಡ್ಡಿ ಮಾತನಾಡಿ, ಕೊಳೆಗೇರಿಗಳಲ್ಲಿ ವಾಸಿಸುವ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವಲ್ಲಿ, ಸಾಂಘಿಕವಾಗಿ ಪ್ರಯತ್ನಿಸಬೇಕಿದೆ ಎಂದರು.

<><><>

'ಬದಲಾವಣೆಗಾಗಿ ಜನರನ್ನು ಸಬಲಗೊಳಿಸುವುದು; ಮೀನುಗಾರಿಕೆ ಹಾಗೂ ಜಲಚರ ಸಾಕಣೆಯಲ್ಲಿ, ಯುವಜನತೆ ಮತ್ತು ಮಹಿಳೆಯರನ್ನು ಪ್ರೋತ್ಸಾಹಿಸುವುದು' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಮೀನುಗಾರಿಕಾ ದಿನ. ಸುಸ್ಥಿರ ಮೀನುಗಾರಿಕೆಯನ್ನು ಉತ್ತೇಜಿಸಿ, ಮೀನುಗಾರಿಕೆ ಸಮುದಾಯವನ್ನು ಪ್ರೋತ್ಸಾಹಿಸಲು, ಈ ದಿನ ಮೀಸಲಾಗಿದೆ.

<><><>

ಉತ್ತರಕನ್ನಡ ಜಿಲ್ಲೆಯನ್ನು, ಸೀ ಕೇಜ್ ಕ್ಲಸ್ಟರ್ ಎಂದು ಗುರುತಿಸಲಾಗಿದೆ. ಮುರುಡೇಶ್ವರದ, ಮೀನುಗಾರಿಕೆ ಹೊರ ಬಂದರನ್ನು, 398 ಕೋಟಿ ರೂಪಾಯಿ ವೆಚ್ಚದಲ್ಲಿ, ನಿರ್ಮಿಸಲಾಗುತ್ತಿದೆ ಎಂದು, ಮೀನುಗಾರಿಕೆ ಇಲಾಖೆ, ಜಂಟಿ ನಿರ್ದೇಶಕ ರವೀಂದ್ರ ತಳೇಕರ ಮಾಹಿತಿ ನೀಡಿದ್ದಾರೆ.

<><><>

ರವೀಂದ್ರ ತಳೇಕರ ಧ್ವನಿ– 48 ಸೆಕೆಂದುಗಳು

<><><>

ಇಂದು ವಿಶ್ವ ದೂರದರ್ಶನ ದಿನ. ಮಾಹಿತಿ, ಶಿಕ್ಷಣ, ಮನೋರಂಜನೆ ಹಾಗೂ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸುವಲ್ಲಿ, ದೂರದರ್ಶನ ಪ್ರಮುಖ ಮಾಧ್ಯಮವಾಗಿದೆ. 1996 ರಲ್ಲಿ ವಿಶ್ವಸಂಸ್ಥೆ, ಸಾಮಾನ್ಯ ಸಭೆ, ನವೆಂಬರ್ 21 ನ್ನು ದೂರದರ್ಶನ ದಿನ ಎಂದು ಘೋಷಿಸಿತು. ದೇಶದಲ್ಲಿ, ಒಟ್ಟು 918 ಉಪಗ್ರಹ ಆಧಾರಿತ ಟಿ.ವಿ ಚಾನೆಲ್ ಗಳಿದ್ದು, 23 ಕೋಟಿ ಮನೆಗಳು ಟಿ.ವಿ. ಹೊಂದಿದ್ದು, ಒಟ್ಟು 90 ಕೋಟಿ ವೀಕ್ಷಕರಿದ್ದಾರೆ.

<><><>

ಭೋಪಾಲ್‌ನ, ಭಾರತೀಯ ಕೃಷಿ ಸಂಶೋಧನಾ ಮಂಡಳಿ, *ICAR-ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈ ಸೆಕ್ಯುರಿಟಿ ಅನಿಮಲ್ ಡಿಸೀಸಸ್,* ಅಭಿವೃದ್ಧಿಪಡಿಸಿದ, ಭಾರತದ ಮೊದಲ, ಸ್ವದೇಶಿ H5 N1 ಹಕ್ಕಿ ಜ್ವರದ ಲಸಿಕೆಯನ್ನು, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ಸಚಿವ, ಶಿವರಾಜಸಿಂಗ್ ಚೌವ್ಹಾಣ್, ಬಿಡುಗಡೆ ಗೊಳಿಸಿದರು. ಕೋಳಿ ಸಾಕಣೆದಾರರ ಜೀವನೋಪಾಯವನ್ನು ಬಲಪಡಿಸುವಲ್ಲಿ ಲಸಿಕೆ ಮಹತ್ವದ ಪಾತ್ರ ವಹಿಸಲಿದೆ. ಸಂಸ್ಥೆಯ ವಿಜ್ಞಾನಿಗಳು ಮತ್ತು ಸಂಶೋಧಕರ ಕೊಡುಗೆ, ಮನನೀಯ ಎಂದರು.

<><><>

ಬಳ್ಳಾರಿ ನಗರದ ವಿವಿಧೆಡೆಗಳಲ್ಲಿ, 9 ಬಾಲ ಹಾಗೂ ಕಿಶೋರ ಕಾರ್ಮಿಕ ಮಕ್ಕಳನ್ನು, ಮಕ್ಕಳ ತುರ್ತು ರಕ್ಷಣಾ ಪಡೆ, ಪತ್ತೆ ಹಚ್ಚಿ ರಕ್ಷಿಸಿದೆ. ತಪಾಸಣೆ ವೇಳೆ, ಮಕ್ಕಳು ದುಡಿಯುತ್ತಿರುವುದು ಕಂಡುಬಂದಿದ್ದು, ಸ್ಥಳದಲ್ಲೇ 9 ಬಾಲ ಕಾರ್ಮಿಕ ಮಕ್ಕಳನ್ನು ವಶಕ್ಕೆ ಪಡೆದು, ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಧಾರವಾಡ ಐ.ಐ.ಟಿ.ಯಿಂದ, ಸೈನಿಕರಿಗಾಗಿ, ಸ್ವದೇಶಿ ತಂತ್ರಜ್ಞಾನದ, ಹಗುರ, ಸುಲಭ ಸಾಗಣೆ ಸಾಧ್ಯ, ಬುಲೆಟ್ ನಿರೋಧಕ ಬಂಕರ್, ವಿನ್ಯಾಸ.

ರಾಜ್ಯದ 4 ಸಾವಿರದ 828 ಕೆರೆಗಳ ಒತ್ತುವರಿ ತೆರವಿಗೆ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ, ವಿಶೇಷ ಕಾರ್ಯಪಡೆ ರಚನೆ.

ರಾಜ್ಯದ, 3 ಸಾವಿರ ಕೊಳೆಗೇರಿಗಳ ಅಭಿವೃದ್ಧಿಗೆ, ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ, ಯೋಜಿತ ಪ್ರಯತ್ನ.

ಇಂದು, ವಿಶ್ವ ಮೀನುಗಾರಿಕೆ ಪ್ರೋತ್ಸಾಹ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>